ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 17.01.2025.

**ಪಾಟೀ ಸವಾಲುಃ** 1ನೇ ಪ್ರತಿವಾದಿ ಪರ ಶ್ರೀ ಡಿ.ಹೆಚ್.ಹೆಚ್. ವಕೀಲರಿಂದಃ

ಹೈದರಸಾಬ ರವರು ನನಗೆ ಸೋದರ ಮಾವನಾಗಬೇಕು. ಸದರಿ ಹೈದರಸಾಬ ರವರು ನಮ್ಮ ಮನೆಯ ಕಾರ್ಯಕ್ರಮಗಳಿಗೆ ಬರುತ್ತಿದ್ದರು ಹಾಗೂ ನಾನು ಕೂಡಾ ಅವರ ಮನೆಯ ಕಾರ್ಯಕ್ರಮಗಳಿಗೆ ಹೋಗುತ್ತಿದ್ದೆ. ಹೈದರಸಾಬ ರವರ ಮದುವೆ 1ನೇ ಪ್ರತಿವಾದಿ ಜೊತೆ ಆದಾಗ

ನಾನು ಹೋಗಿದ್ದೆ. ಸದರಿ ಮದುವೆ ಕಾಲಕ್ಕೆ 1ನೇ ಹೆಂಡತಿಯ ಎಲ್ಲ ಮಕ್ಕಳು ಕೂಡಾ ಹಾಜರಿದ್ದರು ಎಂದರೆ ಸರಿ. ಸದರಿ ಮದುವೆ ಕೊರಳ್ಳಿ ಗ್ರಾಮದ ಹೈದರಸಾಬ ರವರ ಮನೆಯ ಮುಂದೆ ಆಗಿರುತ್ತದೆ. ಸದರಿ ಮದುವೆಯಾಗಿ ಸುಮಾರು 10-12 ವರ್ಷವಾಗಿರುತ್ತದೆ. ಮದುವೆಯಾದ ನಂತರ 1ನೇ ಪ್ರತಿವಾದ ಮತ್ತು ಹೈದರಸಾಬ ರವರು ಕಲಬುರಗಿಗೆ ಬಂದಿರಲಿಲ್ಲ, ಹೈದರಸಾಬ ರವರು ಮಾತ್ರ ಕಲಬುರಗಿಗೆ ಬಂದಿದ್ದರು. ಹೈದರಸಾಬ ರವರು ತನ್ನ ಕುಟುಂಬಕ್ಕೆ ಮಾಡುತ್ತಿದ್ದ ಎಲ್ಲ ಖರ್ಚುಗಳನ್ನು ನನಗೆ ಹೇಳುತ್ತಿದ್ದರು. ಆತನ ಬಳಿ ಎಷ್ಟು ಹಣ ಇದೆ ಎಂಬುವುದರ ಬಗ್ಗೆ ಕೂಡಾ ಆತ ನನಗೆ ಹೇಳುತ್ತಿದ್ದ.

ಆತನ ಬಳಿ ಸುಮಾರು ರೂ.1,15,000/- ಮತ್ತು ರೂ.30,000/- ಹಣ ಇದ್ದವು. ಸದರಿ ಹಣವನ್ನು ನನ್ನ ಸಮಕ್ಷಮ ಏಣಿಸಿರುತ್ತಾರೆ. ಸದರಿ ಹಣವನ್ನು ನಾನು ಏಣಿಸಿಲ್ಲ, ಅಲ್ಲಿದ್ದ ಫೀರ ಮಹ್ಮದ್ ರವರು ಏಣಿಸಿರುತ್ತಾರೆ. ಸದರಿ ಹಣವನ್ನು ಹೈದರಸಾಬ ರವರು ತನ್ನ ಹತ್ತಿರ ಇಟ್ಟುಕೊಂಡಿದ್ದರು. ಹೈದರಸಾಬ ರವರ ಬಳಿ ಬಂಗಾರ ಮತ್ತು ಬೆಳ್ಳಿ ಇದ್ದ ಬಗ್ಗೆ ನನಗೆ ಗೊತ್ತು. ಆತನ ಹತ್ತಿರ 2 ತೊಲಾ ಬಂಗಾರ ಬೋರಮಾಳ ಇತ್ತು. ಹೈದರಸಾಬ ರವರು ತನ್ನ 2ನೇ ಹೆಂಡತಿಗೆ ಅಂದರೆ 1ನೇ ಪ್ರತಿವಾದಿಗೆ ಬೋರಮಾಳ ಹಾಕಿರುತ್ತಾರೆ. ಸದರಿ ಬೋರಮಾಳವನ್ನು 2ನೇ ಹೆಂಡತಿಗೆ ಹಾಕುವ ಕಾಲಕ್ಕೆ ನಾನು ನೋಡಿರುತ್ತೇನೆ. ಅದೇ ರೀತಿ ಹೈದರಸಾಬ ರವರ ಹತ್ತಿರ 15 ತೊಲಾ ಬೆಳ್ಳಿ ಇತ್ತು. ಸದರಿ 15 ತೊಲಾ ಬೆಳ್ಳಿಯ ಚೈನ್‌ಗಳನ್ನು ಮಾಡಿಸಲಾಗಿತ್ತು. 1ನೇ ಪ್ರತಿವಾದಿಗೆ ಕಿವಿಯಲ್ಲಿ ಹಾಕುವ ಒಲೆ ಕೂಡಾ ಇದ್ದವು, ಅವುಗಳ ಸಹಿತ ಬಂಗಾರ 2 ತೊಲಾ ಇತ್ತು.

ನಾನು ಹೈದರಸಾಬ ರವರ ಬ್ಯಾಂಕ್ ಪಾಸ್‌ಬುಕ್‌ನ್ನು ನೋಡಿಲ್ಲ. ಹೈದರಸಾಬ ರವರ ಬ್ಯಾಂಕ್ ಪಾಸ್‌ಬುಕ್‌ನ್ನು ನಾನು ನೋಡಿಲ್ಲ. ಹೈದರಸಾಬ ರವರ ಹತ್ತಿರ ಮೇಲೆ ಹೇಳಿದ ರೂ.1,15,000/- ಮತ್ತು ರೂ.30,000/- ಹಣ ಮಾತ್ರ ಪಾಸ್‌ಬುಕ್‌ದಲ್ಲಿ ಇತ್ತು. ಹೈದರಸಾಬ ರವರು ತನ್ನ ಜೀವಿತ

ಕಾಲದಲ್ಲಿ 2 ಮೃತ್ಯ ಪತ್ರಗಳನ್ನು (ವಶಿಯತ್) ಮಾಡಿದ್ದ. ಸದರಿ 1ನೇ ಮೃತ್ಯ ಪತ್ರಕ್ಕೆ ನನ್ನ ಸಹಿ ಇತ್ತು. ಸದರಿ 1ನೇ ಮೃತ್ಯ ಪತ್ರವನ್ನು ಕಲಬುರಗಿಯ ನ್ಯಾಯಾಲಯದಲ್ಲಿ ಮಾಡಲಾಗಿತ್ತು. ಸದರಿ ಮೃತ್ಯ ಪತ್ರವನ್ನು ನನ್ನ ಹಾಗೂ ಇಬ್ಬರು ಸಾಕ್ಷಿದಾರರ ಸಮಕ್ಷಮ ಮಾಡಿದ್ದರು. ಸದರಿ ಮೃತ್ಯ ಪತ್ರವನ್ನು ಮಾಡಲು ಹೈದರಸಾಬ ರವರು ನಮ್ಮ ಮನೆಗೆ ಒಬ್ಬರೇ ಬಂದಿದ್ದರು. ಸದರಿ ಹೈದರಸಾಬ ರವರು ನನ್ನ ಹಾಗೂ ಉಳಿದ ಇಬ್ಬರು ಸಾಕ್ಷಿದಾರರಾದ ಫೀರ ಮಹ್ಮದ್ ಹಾಗೂ ಮೈಬೂಬ ರವರ ಸಮಕ್ಷಮ ಹೇಳಿ ಕರೆದುಕೊಂಡು ಹೋಗಿದ್ದರು.

ಸದರಿ ಮೃತ್ಯ ಪತ್ರ ಮಾಡುವ ಕಾಲಕ್ಕೆ ನಾವು ಮೂರು ಜನ ಇದ್ದರು. ಸದರಿ ಮೃತ್ಯ ಪತ್ರ ಮಾಡಲು ಹೈದರಸಾಬ ರವರು ಮಾಹಿತಿ ಕೊಟ್ಟಿರುತ್ತಾರೆ ಹಾಗೂ ಅವರ ಜೊತೆ ಬೆರಳಚ್ಚು ಮಾಡುವ ಕಾಲಕ್ಕೆ ನಾವು ಕೂಡಾ ಇದ್ದೇವು. ಸದರಿ ಮೃತ್ಯ ಪತ್ರದಲ್ಲಿ ನನ್ನ ಹೆಸರು ಕೂಡಾ ಬೆರಳಚ್ಚು ಮಾಡಲಾಗಿತ್ತು. ನಾವು ಮೂರು ಜನ ಸದರಿ ಮೃತ್ಯ ಪತ್ರಕ್ಕೆ ಸಹಿ ಮಾಡಿರುತ್ತೇವೆ. ಮೂರು ಜನರ ಪೈಕಿ ಮೊದಲು ನಾನು ಕನ್ನಡದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಮೃತ್ಯ ಪತ್ರಕ್ಕೆ ನಾನು ಮೊದಲು ಸಹಿ ಮಾಡಿದ್ದು, ನಂತರ ಫೀರ ಮಹ್ಮದಿ ಮಾಡಿರುತ್ತಾರೆ, ಅವರು ಮಾಡಿದ ನಂತರ ಹೈದರಸಾಬ ರವರು ಮಾಡಿರುತ್ತಾರೆ, ತದನಂತರ ಮೈಬೂಬ ರವರು ಸಹಿ ಮಾಡಿರುತ್ತಾರೆ. ಮೃತ್ಯ ಪತ್ರ ಮಾಡುವ ಕಾಲಕ್ಕೆ ಹೈದರಸಾಬ ರವರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು.

ಹೈದರಸಾಬ ರವರು ಮುಂಬೈ ಆಸ್ಪತ್ರೆಯಲ್ಲಿ ಸುಮಾರು 2-3 ತಿಂಗಳ ದಾಖಲಾಗಿದ್ದರು. ಹೈದರಸಾಬ ರವರ ಚಿಕಿತ್ಸೆಗೆ ಎಷ್ಟು ಖರ್ಚು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಹೈದರಸಾಬ ರವರು ಹೈದ್ರಾಬಾದ್‌ನಲ್ಲಿ ಕೂಡಾ ದಾಖಲಾಗಿದ್ದರು, ಎಷ್ಟು ದಿನಗಳ ಕಾಲ ದಾಖಲಾಗಿದ್ದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಹೈದರಸಾಬ ರವರ ಚಿಕಿತ್ಸೆಗೆ ಎಷ್ಟು ಖರ್ಚು ಆಗಿದೆ ಎಂದು ನನಗೆ ಗೊತ್ತಿಲ್ಲ. ಮುಂಬೈದಲ್ಲಿ ಹೈದರಸಾಬ ರವರ ಒಂದು ಮನೆ ಇತ್ತು ಎಂದರೆ ಸರಿ,

ಅದನ್ನು ಆತ ಸ್ವತಃ ಖರೀದಿಸಿದ್ದರು. ನಂತರ ಅದನ್ನು ಮಾರಾಟ ಮಾಡಿರುತ್ತಾರೆ. ಸದರಿ ಮನೆಯನ್ನು ಸುಮಾರು ರೂ.20-25 ಲಕ್ಷಕ್ಕೆ ಮಾರಾಟ ಮಾಡಲಾಗಿತ್ತು. ಸದರಿ ಹಣವನ್ನು ಹೈದರಸಾಬ ರವರು ಎಲ್ಲಿ ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಹಣ ಇಟ್ಟಿದ್ದರ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳನ್ನು ಓದಿ ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹಣಕಾಸಿನ ವಿಷಯವಾಗಿ ಹಾಗೂ ಧಾರ್ಮಿಕ ವಿಷಯವಾಗಿ ಹೈದರಸಾಬ ರವರು ನನ್ನ ಸಮಕ್ಷಮ ಹೇಳುತ್ತಿದ್ದರು ಎಂದು ಬರೆಯಲಾಗಿದೆ ಎಂದರೆ, ಸಾಕ್ಷಿ ಕೋರಳ್ಳಿ ಗ್ರಾಮದ ಆಸ್ತಿಗಳ ಬಗ್ಗೆ ವಶಿಯತ್ ಬಿಟ್ಟು ಬೇರೆ ಏನು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮುಂಬೈಯಲ್ಲಿಯ ಮಾರಾಟದ ಹಣವನ್ನು 1ನೇ ಹೆಂಡತಿ ಮಕ್ಕಳಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಲಬುರಗಿಯಲ್ಲಿ ಮಾಡಿದ ಮೃತ್ಯ ಪತ್ರವನ್ನು ಮಾಲಿ ಪಾಟೀಲ್ ಎಂಬ ವಕೀಲರು ತಯಾರಿಸಿರುತ್ತಾರೆ. ಸದರಿ ಮೃತ್ಯ ಪತ್ರ ಮಾಡುವ ಕಾಲಕ್ಕೆ 1ನೇ ಪ್ರತಿವಾದಿ ಇರಲಿಲ್ಲ. ಸದರಿ ಮೃತ್ಯ ಪತ್ರದಲ್ಲಿ 1ನೇ ಪ್ರತಿವಾದಿ ಹೆಸರು ಬರೆದಿರುತ್ತಾರೆ. ಸದರಿ ಮೃತ್ಯ ಪತ್ರ ಮಾಡಿದ್ದರ ಬಗ್ಗೆ ಹೈದರಸಾಬ ರವರ 1ನೇ ಹೆಂಡತಿ ಮಕ್ಕಳಿಗೆ ಹಾಗೂ ಯಾರಿಗೂ ಗೊತ್ತಿಲ್ಲ, ನಮ್ಮ ಮೂರು ಜನಕ್ಕೆ ಮಾತ್ರ ವಶಿಯತ್ ಮಾಡಿದ್ದರ ಬಗ್ಗೆ ಗೊತ್ತಿದೆ.

ಹೈದರಸಾಬ ರವರಿಗೆ 1 ಮನೆ ಮತ್ತು 1 ಜಮೀನು ಇರುತ್ತದೆ. ನಾನು ಹೈದರಸಾಬ ರವರ ಜೊತೆ ನಮ್ಮ ಧರ್ಮದ ಧಾರ್ಮಿಕ ವಿಷಯವಾಗಿ ಕೂಡಾ ಮಾತನಾಡುತ್ತಿದ್ದ. ಹೈದ್ರಾಬಾದ್‌ದಲ್ಲಿ ಸದರಿ ಹೈದರಸಾಬ ರವರು ದಾಖಲಾದಾಗ ಆತನನ್ನು ಮಾತನಾಡಿಸಲು ಹೋಗಿರಲಿಲ್ಲ. ಸದರಿ ಮೃತ್ಯ ಪತ್ರ ಮಾಡವುಕ್ಕಿಂತ ಮುಂಚೆ ಹೈದರಸಾಬ ರವರು 1ನೇ ಪ್ರತಿವಾದಿ ಹೆಸರಿನಲ್ಲಿ ನ್ಯಾಯಾಲಯದಲ್ಲಿ ಜೀವನಾಂಶ ಅಂತ ದಾವಾ ಸ್ವತ್ತುಗಳನ್ನು ಡಿಕ್ರಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ವಶಿಯತ್ ಮಾಡುವುಕ್ಕಿಂತ ಮುಂಚೆ 1ನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಡಿಕ್ರಿ ಮಾಡಿಕೊಡಲಾಗಿತ್ತು ಎಂದರೆ ಸರಿ. 1ನೇ ಪ್ರತಿವಾದಿಗೆ ದಾವಾ ಜಮೀನನ್ನು ಡಿಕ್ರಿಯಾಗಿ ಕೊಡಲಾಗಿತ್ತು ಎಂದರೆ ಸರಿಯಲ್ಲ.

ಹೈದರಸಾಬ ರವರು ನೋಂದಣಿ ಮೃತ್ತ ಪತ್ರ ಮಾಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನೋಂದಣಿ ಮೃತ್ಯ ಪತ್ರ ಮಾಡಿದ್ದರ ಬಗ್ಗೆ ಹೈದರಸಾಬ ರವರು ನನಗೆ ಯಾವತ್ತು ಹೇಳಿಲ್ಲ. ಮೃತ್ಯ ಪತ್ರದಲ್ಲಿ ನನ್ನ ಹೆಸರನ್ನು ನಾನು ಹೇಳಿದ ನಂತರವೇ ಬೆರಳಚ್ಚು ಮಾಡಿರುತ್ತಾರೆ. ಮೃತ್ಯ ಪತ್ರದಲ್ಲಿ ಹೈದರಸಾಬ ರವರು ಎಂದೂ ಕೂಡಾ ಸಹಿ ಮಾಡಿರುವುದಿಲ್ಲ ಹಾಗೂ ಆತನ ಸಹಿಯನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹೈದರಸಾಬ ರವರಿಗೆ ಸದರಿ ವಿವಾದಿತ ಮೃತ್ಯ ಪತ್ರವನ್ನು ಮಾಡುವ ಕಾಲಕ್ಕೆ ನಡೆಯಲು ಮತ್ತು ಆತನಿಗೆ ಏನು ಮಾಡುತ್ತಿದ್ದೇನೆ ಎಂದು ತಿಳಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯ ಪತ್ರವನ್ನು ಮಾಡುವುಕ್ಕಿಂತ ಮುಂಚೆ ಹೈದರಸಾಬ ರವರು ನೋಂದಾಯಿತು ಮೃತ್ಯ ಪತ್ರ ಮಾಡಿಕೊಟ್ಟಿದ್ದರು ಹಾಗೂ ಒಂದು ವೇಳೆ ಹೈದರಸಾಬ ರವರು ಮೃತ್ಯ ಪತ್ರವನ್ನು ಮಾಡುವುದೇ ಆಗಿದ್ದಲ್ಲಿ ವಿವಾದಿತ ಮೃತ್ಯ ಪತ್ರವಂನ್ನು ಕೂಡಾ ನೊಂದಣಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಜೊತೆ ನನ್ನ ಸಂಬಂಧ ಚೆನ್ನಾಗಿ ಇಲ್ಲ, ಆ ಕಾರಣ ಅವಳಿಗೆ ಹಾನಿ ಉಂಟುಮಾಡಬೇಕೆಂಬ ಉದ್ದೇಶದಿಂದ, ವಾದಿಯರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿವಾದಿತ ಮೃತ್ಯ ಪತ್ರದಲ್ಲಿ ಬ್ಯಾಂಕ್‌ನಲ್ಲಿ ಹಣ ಇದ್ದ ಬಗ್ಗೆ ಬರೆದಿದ್ದು, ಆ ರೀತಿ ಯಾವುದೇ ಹಣ ಮತ್ತು ಬಂಗಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u>** <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**